

# ನಾಸಿಕದ ಕೆಳಗೆ ನಸು ಕಪ್ಪು..

**ಹಾರ್ಮೋನು ಹುಚ್ಚಾಟದ ಸಮಸ್ಯೆಗಳು ಒಂದೆರಡಲ್ಲ. ಇಲ್ಲವಾದಲ್ಲಿ ಅಷ್ಟು ಸುಂದರ ವದನದ ಹುಡುಗಿಗೆ ಈ ಮೀಸೆಯ ಕಾಟವೇಕೆ?**

**ಮುದ್ದು** ಉಕ್ಕಿಸುವ ವದನಾರವಿಂದ. ಯೌವನವನ್ನು ಕಾಡುವ ಮೊಡವೆಯ ಗೊಡವೆಯಿಲ್ಲ. ಬಣ್ಣವೋ ಹಾಲ್ಗಡಲಂತೆ ಶುಭ್ರ. ಮುಂಗುರುಳಿನ ಲಾಸ್ಯ, ದುಂಬಿಗಣ್ಣಿನ ನೋಟ, ಕೆನ್ನೆಯ ನುಣುಪು, ಅರೆಬಿರಿದ ತುಟಿಗಳ ಕೆಂಪು... ಎಲ್ಲವನ್ನೂ ಇನ್ನೊಮ್ಮೆ ನೋಡುವ ತವಕ. ಆದರೆ ಹುಡುಗನ ದೃಷ್ಟಿ ಮಾತ್ರವಲ್ಲ, ಬೇರೆ ಹುಡುಗಿಯರ ನೋಟ ತನ್ನ ಮುಖದ ಮೇಲಿದೆ ಎಂದಾಕ್ಷಣ, ಆ ಸುಂದರಿ ಬಾಯಿಯ ಮೇಲೆ ಕರವಸ್ತ್ರ ಇಟ್ಟುಕೊಳ್ಳುತ್ತಾಳೆ!

ಅಷ್ಟಕ್ಕೂ ಬಾಯಿಗೇನೂ ಆಗಿಲ್ಲ. ಪುಟ್ಟ ಬಾಯಿ, ಅಂದವಾದ ಹಲ್ಲುಗಳ ಸಾಲು. ಆದರೆ ಅಧರದ ಕೆಂಪಿಗೆ ಕಾಂಟ್ರಾಸ್ಟಾಗಿ ಕಾಣುವ ಮೇಲ್ತುಟಿಯ ಮೇಲಿರುವ ಕಪ್ಪು ರೋಮಗಳ ಸಾಲು. ಅದೇನು ಮೀಸೆಯೆ? 18ರ ಹರೆಯದ ಹುಡುಗಿಗೆ ಮುಖ ತೋರಿಸಲೇ ಮುಜುಗರ..

ಯೌವನದ ನಲಿದಾಟಕ್ಕೆ ಮೂಗುದಾರ ಹಾಕಿದಂತೆ ಜಗ್ಗಿ ನಿಲ್ಲಿಸುವ ಈ 'ಹೇರುಟಿಸಂ' ಹುಡುಗಿಯರ ಆತ್ಮವಿಶ್ವಾಸವನ್ನೇ ಓಡಿಸಿಬಿಡುತ್ತದೆ. ಮಂದಿಗೆ ಮುಖ ತೋರಿಸದಂತೆ ಕರವಸ್ತ್ರ ಅಡ್ಡ ಇಡಬೇಕು. ಇದೊಂದು ವೈದ್ಯಕೀಯ ಸಮಸ್ಯೆ ಎಂದು ಅರ್ಥ ಮಾಡಿಕೊಳ್ಳದ ಜನರಿಂದ 'ಆ ಹುಡುಗಿಗೆ ಮೀಸೆಯಿದೆ ನೋಡ್ರೋ' ಎಂಬ ಲೇವಡಿ ಬೇರೆ.

ಯುವತಿಯ ಸೌಂದರ್ಯಕ್ಕೆ ಮಸಿ ಬಳಿಯುವ ಈ ಹೇರುಟಿಸಂ ಸಮಸ್ಯೆಗೆ ಕಾರಣ ಹಾರ್ಮೋನ್ ಹುಚ್ಚಾಟ. ಈಸ್ಟ್ರೋಜಿನ್ ಹಾಗೂ ಆ್ಯಂಡ್ರೋಜಿನ್ (ಪುರುಷ ಹಾರ್ಮೋನ್) ಎರಡೂ ಮಹಿಳೆಯರಲ್ಲಿರುತ್ತದೆ. ಆದರೆ ಅದೇಕೋ ಆ್ಯಂಡ್ರೋಜಿನ್‌ಗೆ ಉಕ್ಕುವ ಉತ್ಸಾಹ. ಇದರ ಪ್ರಮಾಣ ಜಾಸ್ತಿಯಾದರೆ ಮೇಲ್ತುಟಿ, ಗದ್ದ, ಕೆನ್ನೆಯ ಮೇಲೆ, ಕೈ– ಕಾಲುಗಳ ಮೇಲೆ ದಟ್ಟ ಕಪ್ಪು ವರ್ಣದ, ಬಿರುಸಾದ ಕೂದಲು ಒಡಮೂಡಲು ಶುರು.

ಮನುಷ್ಯನ ದೇಹದಲ್ಲಿ ತುಟಿ, ಅಂಗೈ, ಅಂಗಾಲು ಬಿಟ್ಟರೆ ಎಲ್ಲಾ ಕಡೆ ಕೂದಲಿನ ರಾಶಿಯೇ ಇರುತ್ತದೆ. ಎಲ್ಲೆಲ್ಲಿ ಈ ರೋಮಗಳ ಬೇರಿರಬೇಕು ಎಂಬುದು ಮಗು ತಾಯಿಯ ಹೊಟ್ಟೆಯಲ್ಲಿರುವಾಗಲೇ ಅಚ್ಚು ಬಿದ್ದಿರುತ್ತದೆ. ಕೂದಲಿನಲ್ಲಿ ಎರಡು ವಿಧ. ಒಂದು ಟರ್ಮಿನಲ್ ಕೂದಲು– ಇದು ದಟ್ಟವಾಗಿದ್ದು ಕಣ್ಣುಹುಬ್ಬು, ತಲೆಯ ಮೇಲಿರುತ್ತದೆ. ಇನ್ನೊಂದು ವೆಲ್ಲಸ್ ಕೂದಲು– ಇದು ಮೃದುವಾಗಿ ತಿಳಿ ಬಣ್ಣದಿಂದ ಕೂಡಿದ್ದು. ಪುರುಷ ಹಾರ್ಮೋನ್ ಆ್ಯಂಡ್ರೋಜಿನ್ ಜಾಸ್ತಿಯಾದರೆ ಈ ರೇಷ್ಮೆಯಂಥ ಕೂದಲೂ ಬಿರುಸಾಗಿ ಟರ್ಮಿನಲ್ ಎಂಬ ಹಣೆಪಟ್ಟಿ ಹೊರಬೇಕಾಗುತ್ತದೆ. ಕೂದಲಿಗೆ ಲಿಂಗ ತಾರತಮ್ಯವಿಲ್ಲ. ಪುರುಷರ ದೇಹದಲ್ಲಿರುವಷ್ಟೇ ಕೂದಲು ಮಹಿಳೆಯ ದೇಹದಲ್ಲೂ ಇರುತ್ತವೆ.

ಆದರೆ ಪುರುಷ ಹಾರ್ಮೋನ್ ಟೆಸ್ಟೋಸ್ಟಿರೋನ್‌ನಿಂದಾಗಿ ಪುರುಷರಿಗೆ ಗಡ್ಡ, ಮೀಸೆ ಬರುವುದು. ಜೊತೆಗೆ ಮೈಮೇಲಿನ ಕೂದಲುಗಳೂ ಬಿರುಸು.

ಬಾಲಕಿ ಯೌವನಕ್ಕೆ ಕಾಲಿಟ್ಟ ಕೂಡಲೇ ಈ ಹಾರ್ಮೋನ್‌ಗಳ ಕಿಡಿಗೇಡಿತನ ಶುರು. ಪುರುಷ ಹಾರ್ಮೋನ್ ಟೆಸ್ಟೋಸ್ಟಿರೋನ್ ಮಟ್ಟ ಜಾಸ್ತಿಯಾಗಿ ಕಂಕುಳು, ಜನನಾಂಗ ಪ್ರದೇಶದಲ್ಲಿ ಟರ್ಮಿನಲ್ ಕೂದಲು ಕಾಣಿಸಿಕೊಳ್ಳುತ್ತದೆ. ಆದರೆ ಈ ಹಾರ್ಮೋನ್‌ಗೆ ಕೆಲವು ಯುವತಿಯರೆಂದರೆ ಪ್ರೀತಿ ಜಾಸ್ತಿ. ಹಾರ್ಮೋನ್ ಇನ್ನಷ್ಟು ಸ್ರವಿಸಿ ಅಂದದ ಮೊಗದ ಮೇಲೂ ಅಧಿಪತ್ಯ ಸಾಧಿಸಿಬಿಡುತ್ತದೆ. ಪರಿಣಾಮ ಮೇಲ್ತುಟಿ, ಗದ್ದದ ಮೇಲೆ ಬಿರುಸು ಕೂದಲುಗಳ ಸಾಲು.

ಇದು ಅನುವಂಶಿಕ ಕೂಡಾ. ತಾಯಿಗೋ, ಅಜ್ಜಿಗೋ, ಚಿಕ್ಕಮ್ಮನಿಗೋ ಈ ಸಮಸ್ಯೆ ಇದ್ದರೆ ಪಾಪ ಆ ಕುಟುಂಬದ ಪುಟ್ಟ ಯುವತಿಗೂ ಮುಖ ಮರೆಸಿಕೊಳ್ಳುವ ದೌರ್ಭಾಗ್ಯ. ಈ ಸಂದರ್ಭದಲ್ಲಿ ಹಾರ್ಮೋನ್ ಮೇಲೆ ಬಯ್ಗಳ ಸುರಿಸುವ ಹಾಗೂ ಇಲ್ಲ. ಮೆಡಿಟರೇನಿಯನ್ ದೇಶಗಳ ಮಹಿಳೆಯರಲ್ಲಿ ಕೂಡಾ ಯುವತಿಯರ ಮುಖ, ಮೈಮೇಲೆ ದಟ್ಟ, ಕಪ್ಪು ಕೂದಲು ಸಾಮಾನ್ಯ.

ಮಹಿಳೆಯರ ಮುಖದ ಮೇಲೆ, ದೇಹದ ಮೇಲೆ ಎರ್ರಾಬಿರ್ರಿಯಾಗಿ ಕೂದಲು ಕಾಣಿಸಿಕೊಳ್ಳಲು ಪಾಲಿಸಿಸ್ಟಿಕ್ ಒವೆರಿಯನ್ ಸಿಂಡ್ರೋಮ್ ಎಂಬ ಸಮಸ್ಯೆ ಕೂಡಾ ಕಾರಣ. ಇದರಿಂದ ಪುರುಷ ಹಾರ್ಮೋನ್ ಪ್ರಮಾಣ ಹೆಚ್ಚಾಗಿ ಮೊಡವೆ ಕೂಡಾ ಕಾಣಿಸಿಕೊಳ್ಳುತ್ತದೆ. ಜೊತೆಗೆ ಅನಿಯಮಿತ ಋತುಸ್ರಾವ, ತೂಕ ಜಾಸ್ತಿಯಾಗುವುದು, ಸಂತಾನಹೀನತೆ. ಸ್ಟೀರಾಯ್ಡ್, ಟೆಸ್ಟೋಸ್ಟಿರೋನ್ ಇರುವ ಔಷಧ ಸೇವನೆಯಿಂದಲೂ ಸಮಸ್ಯೆ ಶುರುವಾಗುತ್ತದೆ.

ಚಿಂತಿಸಬೇಡಿ. ಇದಕ್ಕೆ ಪರಿಹಾರ ಬೇಕಾದಷ್ಟಿದೆ. ರಕ್ತ ಪರೀಕ್ಷೆ ಮೂಲಕ ಹಾರ್ಮೋನ್ ಮಟ್ಟ ಅಳೆದು ಪುರುಷ ಹಾರ್ಮೋನ್ ಕಡಿಮೆ ಮಾಡುವ ಮಾತ್ರೆ ನೀಡಲಾಗುತ್ತದೆ. ಹಾರ್ಮೋನ್ ತೊಂದರೆ ಇಲ್ಲದಿದ್ದರೆ ವ್ಯಾಕ್ಸಿಂಗ್, ಎಲೆಕ್ಟ್ರೋಲಿಸಿಸ್, ಲೇಸರ್ ಚಿಕಿತ್ಸೆಯಿಂದ ಕೂದಲನ್ನು ಕಿತ್ತು ಬಿಸಾಕಬಹುದು. ಇಷ್ಟೆಲ್ಲಾ ನಿನ್ನ ನೆರವಿಗಿರುವಾಗ ಯಕಃಶ್ಚಿತ ಕೂದಲಿಗೇಕೆ ಅಂಜಬೇಕು ಚೆಲುವೆ?

■ ಸವಿ